# ನ್ಯಾಯಾಧೀಶರ ಮಾಹಿತಿ: ಪ್ರಜೆಗಳ ಹಕ್ಕು

ನ್ಯಾಯಾಧೀಶರ ನೇಮಕಾತಿ ಹೇಗೆ ಆಗುತ್ತದೆ ಎಂಬುದನ್ನು ತಿಳಿಯುವ ಹಕ್ಕು ನಾಗರಿಕರಿಗಿದೆ. ನ್ಯಾಯಾಧೀಶರ ನೇಮಕಾತಿ ವಿಧಾನ ಹಾಗೂ ಆ ವಿಧಾನಗಳಿಗೇನಾದರೂ ಬದಲಾವಣೆಗಳ ಪ್ರಸ್ತಾವಗಳಿದ್ದಲ್ಲಿ ಅವು ಸಾರ್ವಜನಿಕರಿಗೆ ತಿಳಿಯಬೇಕು ಎಂಬುದನ್ನು ಕೇಂದ್ರ ಮಾಹಿತಿ ಆಯೋಗ ತನ್ನ ಇತ್ತೀಚಿನ ಆದೇಶದ ಮೂಲಕ ಎತ್ತಿ ಹಿಡಿದಿದೆ.

ನ್ಯಾಯಮೂರ್ತಿಗಳ ನೇಮಕಾತಿ ವಿಧಾನ ಹಾಗೂ ಅದರಲ್ಲೇನಾದರೂ ಬದಲಾವಣೆಗಳಿಗೆ ಪ್ರಸ್ತಾವಗಳು ಮಂಡಿತವಾದರೆ ಅವು ಸಾರ್ವಜನಿಕರಿಗೆ ತಿಳಿಯಬೇಕು. ಇದು ಕೇಂದ್ರ ಮಾಹಿತಿ ಆಯೋಗ(ಸಿಐಸಿ)ದ ನಿಲುವು. ಈ ನಿಟ್ಟಿನಲ್ಲಿ ಭಾರತದ ಮುಖ್ಯ ನ್ಯಾಯಾಧೀಶ (ಸಿಜೆಐ) ಹಾಗೂ ಕಾನೂನು ಸಚಿವಾಲಯದ ಮಧ್ಯೆ ನಡೆಯುವ ಮಾಹಿತಿ ವಿನಿಮಯಗಳನ್ನು ಬಹಿರಂಗಗೊಳಿಸಬೇಕು ಎಂದು ಸುಪ್ರೀಂಕೋರ್ಟ್‌ಗೆ ಸಿಐಸಿ ಇತ್ತೀಚೆಗೆ ನಿರ್ದೇಶನ ನೀಡಿರುವುದು ಆಡಳಿತದಲ್ಲಿ ಪಾರದರ್ಶಕತೆಯನ್ನು ಅಳವಡಿಸುವ ನಿಟ್ಟಿನಲ್ಲಿ ಹೊಸದೊಂದು ಹೆಜ್ಜೆಯಾಗಿದೆ.

11 ಪ್ರಕರಣಗಳಿಗೆ ಸಂಬಂಧಿಸಿದಂತೆ ಮಾಹಿತಿ ಹಕ್ಕು (ಆರ್‌ಟಿಐ) ಕಾರ್ಯಕರ್ತ ಸುಭಾಷ್ ಚಂದ್ರ ಅಗರ್‌ವಾಲ್ ಅವರು ವಿಭಿನ್ನ ಮಾಹಿತಿಗಳನ್ನು ತಿಳಿಯ ಬಯಸಿದ್ದರು. ಇವುಗಳಲ್ಲಿ ಕೆಲವು ಪ್ರಶ್ನೆಗಳು ನ್ಯಾಯಾಧೀಶರಾಗಿ ಕೆಲವು ವ್ಯಕ್ತಿಗಳ ನೇಮಕಕ್ಕೆ ಸಂಬಂಧಿಸಿದಂತೆ ಇದ್ದವು. ಮತ್ತಿನ್ನೊಂದಿಷ್ಟು, ಪತ್ರಿಕಾ ವರದಿಗಳ ಆಧಾರದ ಮೇಲೆ ನ್ಯಾಯಾಧೀಶರ ವರ್ತನೆಗಳಿಂದ ಸೃಷ್ಟಿಯಾಗಿದ್ದ ಪ್ರಶ್ನೆಗಳು.

ನ್ಯಾಯಾಧೀಶರ ನೇಮಕಕ್ಕೆ ಸಂಬಂಧಿಸಿದಂತೆ ಅಗರ್‌ವಾಲ್ ಪ್ರಶ್ನೆಗೆ ಸುಪ್ರೀಂಕೋರ್ಟ್‌ನ ಕೇಂದ್ರೀಯ ಸಾರ್ವಜನಿಕ ಮಾಹಿತಿ ಅಧಿಕಾರಿ(ಸಿಪಿಐಓ)ಯಿಂದ ಯಾವುದೇ ಮಾಹಿತಿ ದೊರೆತಿರಲಿಲ್ಲ. ಇದರ ವಿರುದ್ಧ ಸುಭಾಷ್ ಅಗರ್‌ವಾಲ್ ಸಲ್ಲಿಸಿದ್ದ ಮನವಿ ಹಿನ್ನೆಲೆಯಲ್ಲಿ ಸಿಐಸಿ ಈಗ ಈ ನಿರ್ದೇಶನ ನೀಡಿದೆ.

ವಾಸ್ತವವಾಗಿ ನ್ಯಾಯಮೂರ್ತಿಗಳ ನೇಮಕ ಪ್ರಕ್ರಿಯೆ ಹಾಗೂ ಅದರ ಬದಲಾವಣೆಗಳಿಗೆ ಸಂಬಂಧಿಸಿದ ಯಾವುದೇ ಪ್ರಸ್ತಾವವೂ ಜನರಿಗೆ ತಿಳಿಯಬೇಕು ಎಂಬುದನ್ನು ಸಿಐಸಿ ಸ್ಪಷ್ಟ ಪಡಿಸಿದೆ.

ಈಗಿರುವಂತೆ, ಭಾರತದ ಮುಖ್ಯ ನ್ಯಾಯಾಧೀಶ (ಸಿಜೆಐ)ರ ಸುಪರ್ದಿಯಲ್ಲಿರುವ ಎಲ್ಲಾ ಮಾಹಿತಿಗಳನ್ನೂ ಬಹಿರಂಗ ಪಡಿಸಲಾಗುವುದಿಲ್ಲ ಎಂಬ ವಿಚಾರಕ್ಕೆ ಸಂಬಂಧಿಸಿದಂತೆ ಮಾಹಿತಿ ಹಕ್ಕು ಕಾಯಿದೆ (ಆರ್‌ಟಿಐ)ಯಲ್ಲಿ ಪೂರ್ಣ ವಿನಾಯಿತಿ ಏನೂ ಇಲ್ಲ. ಹೈಕೋರ್ಟ್‌ಗಳು ಹಾಗೂ ಸುಪ್ರೀಂಕೋರ್ಟ್‌ಗೆ ನ್ಯಾಯಾಧೀಶರ ನೇಮಕದಂತಹ ಪ್ರಮುಖ ವಿಚಾರದಲ್ಲಿ ಭಾರತ ಸರ್ಕಾರ ಹಾಗೂ ಸಿಜೆಐ ಮಧ್ಯೆ ಏನು ನಡೆಯುತ್ತದೆ ಎಂಬುದು ಸಾರ್ವಜನಿಕರಿಗೆ ತಿಳಿಯಬೇಕು ಎಂದು ಮುಖ್ಯ ಮಾಹಿತಿ ಕಮಿಷನರ್ ಸತ್ಯಾನಂದ ಮಿಶ್ರಾ ಆದೇಶದಲ್ಲಿ ತಿಳಿಸಿದ್ದಾರೆ.

ಉನ್ನತ ನ್ಯಾಯಾಲಯಗಳಲ್ಲಿ ನ್ಯಾಯಾಧೀಶರ ನೇಮಕ ಪ್ರಕ್ರಿಯೆಗೆ ಸಂಬಂಧಿಸಿದ ಕಾನೂನು ಸಚಿವಾಲಯದ ಪರಿಷ್ಕೃತ ಕರಡು ಪ್ರತಿಯನ್ನು ಬಹಿರಂಗಗೊಳಿಸಬೇಕೆಂಬ ಮನವಿಯನ್ನು ಸುಭಾಷ್ ಅಗರ್‌ವಾಲ್ ಮಾಡಿದ್ದರು. ಜೊತೆಗೇ ಇದಕ್ಕೆ ಸಂಬಂಧಿಸಿದಂತೆ ಆಗಿನ ಭಾರತದ ಮುಖ್ಯ ನ್ಯಾಯಮೂರ್ತಿ ಕೆ.ಜಿ.ಬಾಲಕೃಷ್ಣನ್ ಹಾಗೂ ಕಾನೂನು ಸಚಿವ (ವೀರಪ್ಪ ಮೊಯ್ಲಿ)ರ ಮಧ್ಯೆ ನಡೆದ ವಿಚಾರಗಳ ವಿನಿಮಯವನ್ನು ಬಹಿರಂಗಗೊಳಿಸಬೇಕೆಂದೂ ಅವರು ಕೋರಿದ್ದರು.

‘ಕಾನೂನು ಸಚಿವಾಲಯ ಹಾಗೂ ಸಿಜೆಐ ಕಚೇರಿ ಮಧ್ಯೆ ನಡೆದ ಮಾಹಿತಿ ವಿನಿಮಯ ವ್ಯವಹಾರವಿರುವ ಫೈಲ್ ಸುಪ್ರೀಂಕೋರ್ಟ್ ರಿಜಿಸ್ಟ್ರಿಯಲ್ಲಿ ಲಭ್ಯವಿಲ್ಲ ಎಂಬಂತಹ ಸಿಪಿಐಓ ವಾದ ನಿಜವಿರಬಹುದು. ಆದರೆ ಇದು ಸಿಜೆಐ ಕಚೇರಿ ಅಥವಾ ಸುಪ್ರೀಂಕೋರ್ಟ್‌ನ ಯಾವ ವಿಭಾಗದಲ್ಲಿದೆ ಎಂಬುದನ್ನು ಸ್ಪಷ್ಟ ಪಡಿಸಿಲ್ಲ. ಈ ಹಿನ್ನೆಲೆಯಲ್ಲಿ ಈ ಮಾಹಿತಿಯನ್ನು 10 ದಿನಗಳ ಒಳಗೆ ಹುಡುಕಿ, ಮೇಲ್ಮನವಿದಾರರಿಗೆ ನೀಡಬೇಕು’ ಎಂದು ಸಿಪಿಐಓಗೆ ಈಗ ಮಿಶ್ರಾ ನಿರ್ದೇಶನ ನೀಡಿದ್ದಾರೆ.

ನ್ಯಾಯಾಧೀಶರ ನೇಮಕದ ವಿಧಾನದ ಬದಲಾವಣೆ ಭಾರತದ ಪ್ರಜೆಗಳ ಅರಿವಿಗೇ ಬರದಂತೆ ಆಗಬಹುದು ಎಂದು ವಾದಿಸಲಾಗದು. ಆರ್‌ಟಿಐ ಕಾಯಿದೆಯ ಉದ್ದೇಶವೇ ಮಾಹಿತಿಪೂರ್ಣ ನಾಗರಿಕರನ್ನು ಸೃಷ್ಟಿಸಲು ನೆರವಾಗುವುದಾಗಿದೆ ಎಂಬುದನ್ನು ಸಿಐಸಿ ಮತ್ತೆ ಸ್ಪಷ್ಟಪಡಿಸಿದೆ.

ನ್ಯಾಯಾಧೀಶರ ನೇಮಕಗಳಿಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ಜೊತೆಗೆ ಸಿಐಸಿ ಮುಖಾಮುಖಿಯಾಗಿರುವುದು ಇದು ಎರಡನೇ ಬಾರಿ. ಈ ಮುಂಚೆ, ನೇಮಕಾತಿ ಪ್ರಕ್ರಿಯೆ ವಿಧಿವಿಧಾನಗಳು ಮುಚ್ಚಿದ ಬಾಗಿಲಿನ ಹಿಂದೆ ಆಗುವಂಥದ್ದಲ್ಲ ಎಂದು ಸಿಐಸಿ ಆದೇಶಿಸಿತ್ತು. ಸಿಐಸಿಯ ಈ ಆದೇಶದ ವಿರುದ್ಧ ತಡೆ ಆದೇಶ ಪಡೆದುಕೊಂಡಿರುವ ಸುಪ್ರೀಂಕೋರ್ಟ್ ಈ ವಿಚಾರವನ್ನೀಗ ಸಾಂವಿಧಾನಿಕ ಪೀಠದ ಪರಿಶೀಲನೆಗೆ ಸಲ್ಲಿಸಿದೆ.

ನ್ಯಾಯಾಧೀಶರ ನೇಮಕಾತಿ ಹಾಗೂ ಎಲ್ಲಾ ಹಂತಗಳ ಕಾರ್ಯ ನಿರ್ವಹಣೆಗಳಲ್ಲಿ ಪಾರದರ್ಶಕತೆ ಪ್ರಜಾತಂತ್ರವನ್ನು ಬಲಗೊಳಿಸುವಂತಹದ್ದು. ಇದು ಒಂದು ರೀತಿಯಲ್ಲಿ ಪ್ರಭುತ್ವವನ್ನು ಉತ್ತರದಾಯಿತ್ವಕ್ಕೆ ಒಳಪಡಿಸುವುದಾಗಿದೆ. ಆಡಳಿತ ವಿಧಾನವನ್ನು ದಕ್ಷವಾಗಿಸಲು, ಪ್ರಾಮಾಣಿಕವಾಗಿಸಲು ಪಾರದರ್ಶಕತೆ ಅಗತ್ಯ. ಸಿಐಸಿ ಯ ಈ ಆದೇಶ ಈ ನಿಟ್ಟಿನಲ್ಲಿ ಮತ್ತೊಂದು ಹೆಜ್ಜೆ.

■ ಸಿ.ಜಿ.ಮಂಜುಳಾ

